Allotment of sites to S.C. and S.T. by the C.I.T.B., Bangalore on Concessional rate

118. **Sri M. H. JAYAPRAKASH NARAYAN** (Sirsi).—

Will the Minister of State for Municipal Administration be pleased to state :—

(*a*) the date on which the City improvement Trust Board, Bangalore came into existence ;

(*b*) whether it is a fact that sites were allotted to Scheduled Castes and Scheduled Tribes people at a concessional rate of 50 per cent of the fixed price, ever since the Trust Board came into existence ;

(*c*) whether it is a fact that there was a representation for Harijans and Girijans in the Trust Board from the beginning ;

(*d*) whether it is a fact that Harijans and Girijans were allowed to pay the price of the sites allotted to them in six annual instalments ;

(*e*) whether it is a fact that the representation given to Harijans and Girijans in the Trust Board and the facility provided to them for getting sites on concessional rates have now been cancelled ;

(*f*) wheter there is any proposal under the consideration of the Government for providing all the concessions existing earlier as the Harijans and Girijans are put to much hardship due to cancellation of the concessions given to them and to provide for a representation of the said communities in the Board ?

Sri B. M. PATIL (Minister of State for Municipal Administration).—

(*a*) 1945.

(*b*) No.

(*c*) Yes, but not in every Board.

(*d*) Yes.

(*e*) No.

(*f*) The question of nominating a Scheduled Caste/Scheduled Tribe person to the City Improvement Trust Board will be considered at the appropriate time.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಬೆಂಗಳೂರು ನಗರಾಭಿವೃದ್ಧಿ ಮಂಡಲಿಯಲ್ಲಿ ಪೊಲಿಟಿಕಲ್ ನಫರಿಸ್ಟಿಗೂ ಮತ್ತು ಹರಿಜನರಿಗೂ ಸ್ಥಿಟುಗಳನ್ನು ಆ ಸೈಟಿನ ಬೆಲೆಯ ಅರ್ಧ ಬೆಲೆಗೆ ಕೊಡುತ್ತಿದ್ದರು. ಈಗ ಆ ರಿಯಾಯ್ತಿಯನ್ನು ಪೊಲಿಟಿಕಲ್ ನಫರಿಸ್ಟಿಗೆ ಮುಂದುವರೆಸಿ, ಹಂಜನರಿಗೆ ಆ ರಿಯಾಯ್ತಿಯನ್ನು ತೆಗೆಯಲಾಗಿದೆಯೇ ?

† ಶ್ರೀ ಬಿ. ಎಂ. ಪಾಟೀಲ್.—ಈಗ ಮಾನ್ಯ ಸದಸ್ಯರು ಹರಿಜನರಿಗೂ ಮತ್ತು ಪೊಲಿಟಿಕಲ್ ನಫರಿಗೂ ಏನು ರಿಯಾಯ್ತಿಯನ್ನು ಕೊಟ್ಟಿದ್ದರು ಅದನ್ನು ತೆಗೆದುಹಾಕಿದ್ದಾರೆ ಎಂದು ಹೇಳುವುದು ಸರಿಯಲ್ಲ. ಆ ರೀತಿ ರಿಯಾಯ್ತಿಯನ್ನು ಯಾರಿಗೂ ಕೊಟ್ಟಿಲ್ಲ. ಅಂಥಾ ನಿಯಮಗಳು ಅಥವಾ ಪ್ರಾವಿಜನ್‌ಗಳನ್ನು ಯಾವಾಗಲೂ ಮಾಡಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—1964ನೇ ಇಸವಿಯಲ್ಲಿ ಜಾರಿಗೆ ಬಂದಂತಹ ಟ್ರಸ್ಟ್ ಬೋರ್ಡ್ ಆಕ್ಟ್ ಪ್ರಕಾರ ಹರಿಜನ ಗಿರಿಜನರಿಗೆ, ಪರಿಶಿಷ್ಟ ವರ್ಗದವರಿಗೆ 5 ಪರ್ಸೆಂಟ್ ರಿಯಾಯ್ತಿ ದರಕ್ಕೆ ಕೊಡಬೇಕೆಂದು ಕಾನೂನು ಮಾಡಿದ್ದಾರೆ. ಇದರಿಂದ ಹರಿಜನ ಗಿರಿಜನರಿಗೆ ಸೈಟುಗಳು ದೊರೆಯುತ್ತಾ ಇಲ್ಲ. ಆದ್ದರಿಂದ ಹಿಂದೆ ಕೊಡುತ್ತಿದ್ದಂತಹ ರಿಯಾಯ್ತಿ ಏನಿದೆ ಅದನ್ನು 18 ಪರ್ಸೆಂಟಿಗೆ ಏರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಆ ರೀತಿ ಕೊಡಬೇಕೆಂದು ಮಾನ್ಯ ಸದಸ್ಯರ ಅಭಿಪ್ರಾಯ ಇದ್ದರೆ ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

Sri J. P. SARWESH.—Supplementary to (*f*): May I know when this appropriate time will come and as the Minister is sympathetic to the poor people, will he kindly do it at the earliest?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಸರ್ಕಾರದವರು ಆ ಸಮಿತಿಗೆ ನಾಮಕರಣ ಮಾಡಿದ್ದಾರೆ. ಆ ಸಮಿತಿಯ ಅವಧಿ 3 ವರ್ಷಗಳು ಇದೆ. ಆದರ ಅವಧಿ 1970ನೇ ಇಸವಿ ಮಾರ್ಚ್ ತಿಂಗಳಿಗೆ ಮುಗಿಯುತ್ತದೆ. 1970 ನೇ ಇಸವಿಯಲ್ಲಿ ಸರ್ಕಾರ ಇದನ್ನು ಪರಿಶೀಲಿಸುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಈ ಪ್ರಶ್ನೆಗೆ ಉತ್ತರವಾಗಿ ಬೆಂಗಳೂರು ನಗರಾಭಿವೃದ್ಧಿ ಮಂಡಲಿಯಲ್ಲಿ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯವನ್ನು ಒದಗಿಸಿತ್ತು ಎಂದು ಹೇಳಿದ್ದೀರಿ. ಹಾಗಾದರೆ ಇವೊತ್ತು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಲ್ಲಿ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಇದೆಯೇ, ಆ ಮೇಲೆ ಎರಡನೆಯುದು ಟ್ರಸ್ಟ್ ಬೋರ್ಡಿನಲ್ಲಿ ಯಾವ ಆಧಾರದ ಮೇಲೆ ಪ್ರಾತಿನಿಧ್ಯವನ್ನು ಒದಗಿಸಿದ್ದೀರಿ ಮತ್ತು ನಮ್ಮ ಬೆಂಗಳೂರು ನಗರದ ಅಸೆಂಬ್ಲಿ ಸದಸ್ಯರಿಗೆ ಯಾರು ಯಾರಿಗೆ ಟ್ರಸ್ಟ್ ಬೋರ್ಡಿನಲ್ಲಿ ಪ್ರಾತಿನಿಧ್ಯವನ್ನು ಒದಗಿಸಿಕೊಟ್ಟಿದ್ದೀರಿ ಎಂಬುವುದನ್ನು ತಿಳಿಸುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಕಾನಸ್ಟಿಟ್ಯೂಷನ್ ಪ್ರಕಾರ ಟ್ರಸ್ಟ್ ಬೋರ್ಡಿನಲ್ಲಿ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಪ್ರಾವಿಷನ್ ಇಲ್ಲ. ಆದರೂ ಕೆಲವು ವೇಳೆ ನಾಮಿನೇಷನ್ ಮಾಡುವಾಗ ಹರಿಜನರಿಗೆ, ಮತ್ತು ಹಿಂದುಳಿದವರಿಗೆ ಪ್ರಾತಿನಿಧ್ಯ ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಟ್ರಸ್ಟ್ ಬೋರ್ಡುಗಳಿಗೆ ಸದಸ್ಯರನ್ನು ನೇಮಕ ಮಾಡುವಾಗ ಯಾವ ಆಧಾರದ ಮೇಲೆ ನೇಮಕ ಮಾಡುತ್ತೀರಿ, ಮತ್ತು ಬೆಂಗಳೂರು ಸಿಟಿ ಎಂ.ಎಲ್.ಎ. ಗಳನ್ನು ಅದರಲ್ಲಿ ಏತಕ್ಕೆ ನೇಮಕ ಮಾಡಿಲ್ಲ?

ಶ್ರೀ ಬಿ. ಎಂ. ಪಾಟೀಲ್.—ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಲ್ಲಿ ಒಟ್ಟು 11 ಜನ ಸದಸ್ಯರು ಇರುತ್ತಾರೆ. ಅದರಲ್ಲಿ ಚೇರ್ಮನ್ ಅವರನ್ನು ಬಿಟ್ಟು 6 ಜನ ಸದಸ್ಯರನ್ನು ಸರ್ಕಾರದವರು ನಾಮಿನೇಟ್ ಮಾಡುತ್ತಾರೆ. 4 ಜನ ಸದಸ್ಯರನ್ನು ಕಾರ್ಪೊರೇಷನ್ನಿನವರು ಆರಿಸಿ ಕಳುಹಿಸುತ್ತಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಈಗ ಹಾಲಿ ಇರತಕ್ಕ ನಗರಾಭಿವೃದ್ಧಿಯ ನಿಯಮದ ಪ್ರಕಾರ ನಿಮ್ಮ ವರ್ಗದ ಮತ್ತು ನಿಮ್ಮ ಪಂಗಡದವರಿಗೆ ಸೈಟುಗಳನ್ನು ಕೊಡುವಾಗ ಅವರಿಗೆ 300 ರೂಪಾಯಿಗಳ ಕೆಳಗಡೆ ಆದಾಯವಿರತಕ್ಕವರಿಗೆ 6 ವರ್ಷಗಳ ಅವಧಿಯಲ್ಲಿ 6 ಕಂತುಗಳಲ್ಲಿ ಆ ಹಣವನ್ನು ಕೊಡುವ ಒಂದು ರಿಯಾಯ್ತಿ ಇದೆ. ಅದನ್ನು ಈಗಿನ ಪರಿಸ್ಥಿತಿಗನುಗುಣವಾಗಿ 300 ರೂಪಾಯಿಗಳಿಂದ 600 ರೂಪಾಯಿಗಳಿಗೆ ಏರಿಸುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಈಗ ಇದ್ದ ನಿಯಮದ ಪ್ರಕಾರ 300 ರೂಪಾಯಿಗಳಿಗಿಂತ ಕಡಿಮೆ ಆದಾಯ ಇದ್ದವರಿಗೆ 6 ಕಂತುಗಳಲ್ಲಿ ಆ ಹಣವನ್ನು ಕೊಡುವ ಒಂದು ರಿಯಾಯ್ತಿ ಇತ್ತು. ಈಗ ಮಾನ್ಯ ಸದಸ್ಯರು ಅದನ್ನು ಹೆಚ್ಚು ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

Sri D. B. KALMANKAR.—Supplementary to (*b*), may I know whether Government will consider to give sites at concessional rates of 50 per cent as requested by the hon. Member?

ಶ್ರೀ ಬಿ. ಎಂ. ಪಾಟೀಲ್.—ಆ ರೀತಿ ಶೇಕಡಾ 50 ಭಾಗದ ಕನ್‌ಸೆಶನ್ ಕೊಡಬೇಕೆಂದು ಸರ್ಕಾರದ ಅಭಿಪ್ರಾಯವಿಲ್ಲ. ಈಗಿನ ನಿಯಾಮಾವಳಿ ಪ್ರಕಾರ ಶೇಕಡಾ 50 ಕೊಡತಾ ಇಲ್ಲ. ಆದರೆ ಕೆಲವು ಸೌಲಭ್ಯಗಳನ್ನು ಕೊಟ್ಟಿದೆ. ಸೈಟಿನ ಬೆಲೆ ಏನು ಆಗುತ್ತದೆ, ಅದನ್ನು 6 ವರ್ಷಗಳ

ಕಂತುಗಳಲ್ಲಿ ಕೊಡಬಹುದು. ಉಳಿದ ಹಣವನ್ನು ಸೋಪಿ ಬಡ್ಡಿಯಲ್ಲಿ ಅಂದರೆ ಶೇಕಡಾ 3 ರಂತೆ ಬಡ್ಡಿ ದರ ಆಕರಣೆ ಮಾಡಲಾಗಿದೆ.

ಶ್ರೀ ಎಂ. ನಾಗಪ್ಪ.—ತಾವು ಹೇಳಿದಿರಿ, 1970 ರಲ್ಲಿ ಹೊಸದಾಗಿ ಬೋರ್ಡು ರಚನೆ ಮಾಡುವಾಗ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಪ್ರಾತಿನಿಧ್ಯ ಕೊಡುವುದಕ್ಕೆ ಯೋಚಿಸುತ್ತೇವೆಂದು. ತಾವು ಬೋರ್ಡು ರಚನೆ ಮಾಡತಕ್ಕ ಪರಿಸ್ಥಿತಿಯಲ್ಲಿ ಸರ್ಕಾರ ಒಂದು ಹಕ್ಕು ಉಳಿಸಿಕೊಳ್ಳಲಾರದೆ, ಸಂಬಂಧಪಟ್ಟ ಆಕ್ಟಿಗೆ ತಿದ್ದುಪಡಿ ಮಾಡಿ ಸರಿಯಾದ ಪ್ರಾತಿನಿಧ್ಯ ಬೋರ್ಡಿನಲ್ಲಿ ಇರುವಂತೆ ಮಾಡಲು ಸರ್ಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಜಿ. ಎಂ. ಪಾಟೀಲ್.—ಈಗ ಸದ್ಯಕ್ಕೆ ಆ ತರಹ ಏನೂ ಪ್ರಾವಿಜನ್ಸ್ ಇಲ್ಲ. ಆ ರೀತಿ ಮಾನ್ಯ ಸದಸ್ಯರ ಅಭಿಪ್ರಾಯ ಇದ್ದರೆ ಮತ್ತು ಮಾನ್ಯ ಸಭೆ ಒಪ್ಪಿಗೆ ಕೊಟ್ಟರೆ, ಅದನ್ನು ಪರಿಶೀಲಿಸಿ, ಆ ಒಂದು ಕಾರ್ಯಕ್ರಮ ತೆಗೆದುಕೊಳ್ಳಬಹುದು.

Rice Hand-pounding Co-operative Societies in South Kanara District

299. **Sri B. BHASKARA SHETTY** (Kaup).—

Will the Minister for Development be pleased to state :—

(*a*) the number of Rice Hand-pounding Co-operative societies in South Kanara District ;

(*b*) the names and places of those societies ;

(*c*) the amount of subsidy and loan given to these societies (separate figures may kindly be furnished) ;

(*d*) the quantity of rice pounded in these societies and the amount of subsidy given to them (information may kindly be furnished separately) ;

(*e*) and the number of misappropriation cases in these societies ?

Sri B. L. GOWDA (Deputy Minister for Co-operation).—

(*a*) 23.

(*b*), (*c*) and (*d*) *Vide* statement appended.

(*e*) Nil.